**1** ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ನಂಃ 74/2023

| | | |
|---|---|---|
| ಸಾಕ್ಷಿದಾರರ ಹೆಸರು | - ಸುನಿಲ್ ಅಲಿಯಾಸ್ ಸುನಿ | ಪಿಡಬ್ಲೂ - 01 |
| ತಂದೆಯ ಹೆಸರು | - ಚನ್ನಬಸವಯ್ಯ | ಸಿಡಬ್ಲೂ - 01 |
| ವಯಸ್ಸು | - 27 ವರ್ಷ | |
| ಉದ್ಯೋಗ | - ಚಾಲಕ | |
| ವಾಸ ಸ್ಥಳ | - ಮರ್ಲೆ ಹೊಸಕೋಟೆ | |

ದಿನಾಂಕಃ 05.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

**1.** ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಚಾಸಾ.2 ಮತ್ತು 3 ರವರು ಗೊತ್ತು. ಚಾಸಾ.4 ನನ್ನ ಮಾವ. ಚಾಸಾ.5 ನನ್ನ ಸ್ನೇಹಿತ. ನಾನು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದವನು. ಆರೋಪಿ ಅರಸು ಜನಾಂಗಕ್ಕೆ ಸೇರಿದವನು.

2. ನಾನು ಹೊಸಕೋಟೆಯ ಚೇತನ್ ಎಂಬುವವರ ಬಳಿ ಅವರಿಗೆ ಸೇರಿದ ಟ್ರ್ಯಾಕ್ಟರ್ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದೇನೆ. ನಾನು ಚೇತನ್ ರವರ ಬಳಿ ಕೆಲಸಕ್ಕೆ ಹೋಗುವ ಪೂರ್ವದಲ್ಲಿ ಆರೋಪಿಯ ಬಳಿ ಕೆಲಸ ಮಾಡಿಕೊಂಡಿದ್ದೆನು. ಆದರೆ ಆರೋಪಿ ನಾನು ಕೆಲಸ ಮಾಡಿದ್ದ ಹಣವನ್ನು ನನಗೆ ಕೊಟ್ಟಿರಲಿಲ್ಲ. ಅದನ್ನು ಕೊಡುವಂತೆ ನಾನು ಆರೋಪಿಯ ಬಳಿ ಹಲವಾರು ಬಾರಿ ಕೇಳಿದ್ದೇನೆ, ಆದರೆ ಆತ ಕೊಟ್ಟಿರಲಿಲ್ಲ.

ಹಾಗಾಗಿ ನಾನು ಆರೋಪಿಯ ಬಳಿ ಕೆಲಸ ಬಿಟ್ಟು ಚೇತನ್ ರವರ ಬಳಿ ಕೆಲಸಕ್ಕೆ ಸೇರಿಕೊಂಡಿದ್ದೆನು.

3. ದಿಃ 26-11-2023 ರಂದು ಸದರಿ ಚೇತನ್ ರವರ ಟ್ರ್ಯಾಕ್ಟರಿನಲ್ಲಿ ಇಟ್ಟಿಗೆಯನ್ನು ತುಂಬಿಕೊಂಡು ಚಿಕ್ಕಮಗಳೂರಿನಲ್ಲಿ ಹಾಕಿ ಹೊಸಕೋಟೆಗೆ ವಾಪಸ್ ಹೋಗಿ ಚೇತನ್ ರವರ ಮನೆಯ ಬಳಿ ಟ್ರ್ಯಾಕ್ಟರ್ ನ್ನು ನಿಲ್ಲಿಸಿ ವಾಪಸ್ ನಮ್ಮ ಮನೆಗೆ ಹೋಗಲು ಸೋಮೆಗೌಡರ ಮನೆಯ ಮುಂದೆ ಹೋಗುತ್ತಿದ್ದಾಗ ಸಂಜೆ 7 ರಿಂದ 7.30 ಗಂಟೆ ಸಮಯದಲ್ಲಿ ಆರೋಪಿ ನನ್ನನ್ನು ಅಡ್ಡ ಹಾಕಿ ನಿನಗೆ ಯಾವ ಹಣ ಕೊಡಬೇಕು, ಎಲ್ಲರ ಬಳಿ ಹಣ ಕೊಡಬೇಕೆಂದು ಹೇಳಿಕೊಂಡು ತಿರುಗಾಡುತ್ತಿದ್ದಿಯಾ ಎಂದು ಹೇಳಿ ಹೊಲೆಯ ಸೂಳೆಮಗನೇ, ಮಾದಿಗ ಸೂಳೆಮಗನೇ ಎಂದು ಬೈದನು. ಆಗ ನಾನು ಆರೋಪಿಯನ್ನು ಕುರಿತು ಯಾಕೆ ಆ ರೀತಿ ಬೈಯುತ್ತಿದ್ದೀಯಾ ಎಂದು ಕೇಳಿದಾಗ ಆರೋಪಿ ತನ್ನ ಕೈಗಳಿಂದ ನನ್ನ ಮುಖಕ್ಕೆ ಮತ್ತು ಮೈಕೈಗೆ ಹೊಡೆದು ಅಲ್ಲೇ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ನನ್ನ ಬಲಗೈ ಅಂಗೈಗೆ ಹೊಡೆದು ರಕ್ತಗಾಯ ಮಾಡಿದನು, ಆಗ ನಾನು ಕೆಳಗೆ ಬಿದ್ದೆನು. ಅಷ್ಟರಲ್ಲಿ ಅಂಗಡಿಗೆ ಹೋಗಿದ್ದ ನನ್ನ ಮಾವನಾದ ಚಾಸಾ.4 ಗೋಪಾಲರವರು ಅಲ್ಲಿಗೆ ಬಂದರು. ಆಗ ಆರೋಪಿ ಇನ್ನೊಮ್ಮೆ ನೀನು ಹಣದ ಬಗ್ಗೆ ಬೇರೆಯವರ ಬಳಿ ಹೇಳಿಕೊಂಡು ತಿರುಗಾಡಿದರೆ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ, ಸಾಯಿಸುತ್ತೇನೆ ಎಂದು ಹೇಳಿ ಅಲ್ಲಿಂದ ಹೋದನು.

4. ನಂತರ ಚಾಸಾ.4 ರವರು ಗಾಯಗೊಂಡಿದ್ದ ನನ್ನನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲು ಮಾಡಿದರು. ನಾನು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ಅಲ್ಲಿಗೆ ಬಂದು ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಆರೋಪಿಯ ವಿರುದ್ಧ ಕ್ರಮ ಜರುಗಿಸುವಂತೆ ದೂರನ್ನು ಕೊಟ್ಟೆನು. ಆರೋಪಿ ಹೊಡೆದಿದ್ದರಿಂದ ನನ್ನ ಬಲಗೈಗೆ ಗಾಯವಾಗಿದ್ದರಿಂದ ದೂರಿಗೆ ನಾನು ಸಹಿ ಮಾಡಲು ಆಗಲಿಲ್ಲ, ಹಾಗಾಗಿ ನನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಅದಕ್ಕೆ ಹಾಕಿದ್ದೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿ.ಪಿ.1 ಎಂದು ಗುರುತಿಸಲಾಯಿತು.

5. ಆರೋಪಿ ಹಲ್ಲೆ ಮಾಡಿದ ದಿನದಂದೇ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ದೂರು ಕೊಟ್ಟ 4 ದಿನಗಳ ಬಳಿಕ ಪೊಲೀಸರು ಹೊಸಕೋಟೆಯ ಸೋಮೆಗೌಡರ ಮನೆಯ ಮುಂದಿನ ರಸ್ತೆಯಲ್ಲಿ ಆರೋಪಿ ಮೇಲೆ ಹೇಳಿದಂತೆ ಕೃತ್ಯವೆಸಗಿದ್ದ ಸ್ಥಳಕ್ಕೆ ಬಂದಿದ್ದರು. ಆಗ ನನ್ನೊಂದಿಗೆ ಚಾಸಾ-2 ಪುನಿತ್ ಮತ್ತು ಚಾಸಾ-3 ಧನಂಜಯರವರು ಇದ್ದರು. ಅವರ ಸಮಕ್ಷಮ ನಾನು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದೆನು, ಅಲ್ಲಿ ಪೊಲೀಸರು ಮಹಜರನ್ನು ಬರೆದುಕೊಂಡರು ಮತ್ತು ಫೋಟೋಗಳನ್ನು ತೆಗೆದುಕೊಂಡರು. ಕೃತ್ಯ ನಡೆದ ಸ್ಥಳದಲ್ಲಿಯೇ ಆರೋಪಿ ನನ್ನ ಮೇಲೆ ಹಲ್ಲೆ ಮಾಡಲು ಬಳಸಿದ್ದ ದೊಣ್ಣೆ ಬಿದ್ದಿತ್ತು.

ನಾನು ಸದರಿ ದೊಣ್ಣೆಯನ್ನು ಪೊಲೀಸರಿಗೆ ತೋರಿಸಿದೆನು, ಅವರು ಅದನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಸದರಿ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ದೊಣ್ಣೆಯನ್ನು ನೋಡಿ ಗುರುತಿಸಿ ಆರೋಪಿ ನನಗೆ  ಹಲ್ಲೆ ಮಾಡಲು ಬಳಸಿದ್ದ ದೊಣ್ಣೆ  ಅದೇ ಎಂದು ನುಡಿದ ಮೇರೆಗೆ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸದರಿ ದೊಣ್ಣೆಯ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿ ತನ್ನ ಎಡಗೈ ಹೆಬ್ಬೆಟ್ಟಿನ ಗುರುತು ಕಂಡು ಬರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಪೊಲೀಸರು ಬರೆದುಕೊಂಡ ಮಹಜರಿಗೆ ಸಹ ನಾನು ನನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೇನೆ ಮತ್ತು ಚಾಸಾ.2 ಮತ್ತು 3 ರವರು ಸಹಿಗಳನ್ನು ಮಾಡಿದ್ದಾರೆ. ಸದರಿ ಮಹಜರನ್ನು ಪೊಲೀಸರು ಸಂಜೆ 4.30 ರಿಂದ 5.30 ಗಂಟೆಯವರೆಗೆ ಬರೆದುಕೊಂಡಿದ್ದಾರೆ.  ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿ.ಪಿ.2 ಎಂದು ಗುರುತಿಸಲಾಯಿತು.

6. ಮಹಜರ್ ಸಮಯದಲ್ಲಿ ಪೊಲೀಸರು ತೆಗೆದ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ.  ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ, ಮಹಜರ್ ಸಮಯದಲ್ಲಿ ತೆಗೆದ ಫೋಟೋ ಅದೇ ಎಂದು ನುಡಿದಿರುತ್ತಾರೆ, ಸದರಿ ಫೋಟೋವನ್ನು ನಿ.ಪಿ.3 ಎಂದು

ಗುರುತಿಸಲಾಯಿತು. ಸದರಿ ಫೋಟೋದಲ್ಲಿ ನನ್ನೊಂದಿಗೆ ಚಾಸಾ-2, 3 ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತದೆ.

7. ಗಲಾಟೆಯಾದ ಸುಮಾರು ಒಂದೂವರೆ ತಿಂಗಳುಗಳ ಬಳಿಕ ಚಿಕ್ಕಮಗಳೂರು ಡಿ.ವೈ.ಎಸ್.ಪಿ. ರವರು ನನ್ನನ್ನು ತಮ್ಮ ಕಛೇರಿಗೆ ಕರೆಸಿ ವಿಚಾರಿಸಿದ್ದರು. ಆಗ ನಾನು ಅವರಿಗೆ ಘಟನೆಯ ಬಗ್ಗೆ ಹೇಳಿಕೆಯನ್ನು ನೀಡಿದ್ದೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

8. ನೀವು ಹೇಳಿದಂತೆ ಆರೋಪಿ ನಿಮ್ಮ ಮೇಲೆ ದಿಃ 26-12-2022 ರಂದು ರಾತ್ರಿ ಸುಮಾರು 8 ಗಂಟೆಗೆ ಹಲ್ಲೆ ಮಾಡಿದ್ದನು ಎಂದರೆ ಸರಿ. ನೀವು ಗಾಬರಿಯಿಂದ ಮುಖ್ಯ ವಿಚಾರಣೆಯಲ್ಲಿ ನಿಮ್ಮ ಮೇಲೆ ಹಲ್ಲೆಯಾದ ದಿನಾಂಕವನ್ನು ತಪ್ಪಾಗಿ ಹೇಳಿದ್ದಿರಿ ಎಂದರೆ ಸರಿ. ನೀವು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಗಲಾಟೆಯಾದ ಮಾರನೆ ದಿನ ಅಂದರೆ ದಿಃ 27-12-2022 ರಂದು ರಾತ್ರಿ 7 ರಿಂದ 7.45 ಗಂಟೆಯವರೆಗೆ ಪೊಲೀಸರಿಗೆ ನಿಪಿ.1 ಹೇಳಿಕೆ ದೂರನ್ನು ನೀಡಿದ್ದಿರಿ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಡಿಸಿಪಿ ವಕೀಲರಿಂದಃ</u>

9. ಚಾಸಾ.3 ನನ್ನ ಸಂಬಂಧಿಕರಲ್ಲ, ಆದರೆ ನನ್ನ ಸ್ನೇಹಿತ, ಅವರು ನಮ್ಮ ಜಾತಿಗೆ ಸೇರಿದವರಲ್ಲ, ಪರಿಶಿಷ್ಟ ಪಂಗಡಕ್ಕೆ ಸೇರಿದವರು. ಚಾಸಾ.2 ರವರು ನನ್ನ ಬಾವ. ಚಾಸಾ.5 ನಿಮ್ಮ ಸಂಬಂಧಿಕ ಎಂದರೆ ಸರಿಯಲ್ಲ. ಚಾಸಾ.5 ನಿಮ್ಮ ಸಮುದಾಯಕ್ಕೆ ಸೇರಿದವರು ಎಂದರೆ ಸರಿ.

10. ನೀವು ಚೇತನ್‌ರವರ ಬಳಿ ಕೆಲಸ ಮಾಡಿಕೊಂಡಿದ್ದಾಗಿ ಹೇಳಿದ್ದಿರಿ, ಆತ ಆರೋಪಿಗೆ ಸೋದರ ಸಂಬಂಧಿ ಎಂದರೆ ಸರಿ. ಈಗ್ಗೆ 4 ವರೆ ವರ್ಷಗಳಿಂದ ನಾನು ಚೇತನ್ ರವರ ಬಳಿ ಕೆಲಸ ಮಾಡಿಕೊಂಡಿದ್ದೇನು. ಗಲಾಟೆಯಾದ ಸಮಯದಲ್ಲಿ ನಾನು ಚೇತನ್ ರವರ ಬಳಿ ಕೆಲಸಕ್ಕೆ ಸೇರಿ ಸುಮಾರು 3 ತಿಂಗಳಾಗಿತ್ತು. ನಾನು ಆರೋಪಿಯ ಬಳಿ ಕೆಲಸ ಮಾಡಿಕೊಂಡಿದ್ದ ಸಮಯದಲ್ಲಿ ವಾರಕ್ಕೆ ಒಮ್ಮೆ ಸಂಬಳವನ್ನು ಕೊಡುತ್ತಿದ್ದನು. ನೀವು ಆರೋಪಿಯ ಬಳಿ ಕೆಲಸವನ್ನು ಬಿಡುವ ಸಮಯದಲ್ಲಿ ನಿಮಗೆ ಕೊಡಬೇಕಾಗಿದ್ದ ಸಂಪೂರ್ಣ ಹಣವನ್ನು ಆತ ನಿಮಗೆ ಪಾವತಿಸಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಆರೋಪಿಯ ಬಳಿ ಆತನಿಗೆ ಸೇರಿದ್ದ ಟ್ರ್ಯಾಕ್ಟರ್ ಸಹಾಯಕನಾಗಿ ಸುಮಾರು 6 ತಿಂಗಳ ಕಾಲ ಕೆಲಸ ಮಾಡಿದ್ದೇನು. ಆರೋಪಿಯ ಟ್ರ್ಯಾಕ್ಟರ್ ನ ನೊಂದಣಿ ಸಂಖ್ಯೆ ನನಗೆ ನೆನಪಿಲ್ಲ. ಅದರ ಆರ್.ಸಿ. ಮಾಲೀಕ ಯಾರೆಂದು ನನಗೆ ಗೊತ್ತಿಲ್ಲ. ನಾನು ಚೇತನ್‌ರವರ ಬಳಿ ಕೆಲಸಕ್ಕೆ ಸೇರಿಕೊಂಡ ಬಳಿಕ ಆರೋಪಿಯನ್ನು ಕುರಿತು ನನಗೆ ಬರಬೇಕಾಗಿದ್ದ ಹಣವನ್ನು ಕೊಡುವಂತೆ ಕೇಳಿದ್ದೇನು. ಟ್ರ್ಯಾಕ್ಟರ್ ಚಾಲನೆ ಮಾಡಲು ನನಗೆ ಪರವಾನಿಗೆ ಇಲ್ಲ.

11. ನೀವು ಘಟನೆ ನಡೆದಿದೆ ಎನ್ನಲಾದ ಸ್ಥಳ ಊರಿನ ಮಧ್ಯಭಾಗದಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಸ್ಥಳದ ಸುತ್ತಮುತ್ತ ಆರೋಪಿಯ ಮನೆ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆತ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದನು ಎನ್ನುತ್ತಾರೆ. ಆರೋಪಿ ತನ್ನ ಸ್ನೇಹಿತರೊಂದಿಗೆ ಕೆಂಪು ಬಣ್ಣದ ಎಸ್ಟೀಮ್ ಕಾರಿನಲ್ಲಿ ಆತನ ಮನೆಯಿಂದ ಸ್ವಲ್ಪ ದೂರದಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಬಂದು ಅಲ್ಲಿ ಮಧ್ಯವನ್ನು ಸೇವಿಸುತ್ತಾ ಕುಳಿತ್ತಿದ್ದರು, ನಾನು ರಸ್ತೆಯಲ್ಲಿ ಬರುತ್ತಿದ್ದನ್ನು ನೋಡಿ ಆರೋಪಿ ಒಬ್ಬನೇ ಅಲ್ಲಿಂದ ನಡೆದುಕೊಂಡು ಬಂದನು. ಸದರಿ ಎಸ್ಟೀಮ್ ಕಾರಿನಲ್ಲಿ ಆರೋಪಿ ಸೇರಿ 4 ಜನರಿದ್ದರು. ಆರೋಪಿಯೊಂದಿಗೆ ಅಲ್ಲಿ ಇದ್ದವರು ಯಾರು ಎಂದರೆ ಸಾಕ್ಷಿ ರಮೇಶ ಎನ್ನುವವರು ಗೊತ್ತು, ಇನ್ನಿಬ್ಬರು ಕಾರಿನ ಹಿಂಭಾಗದಲ್ಲಿ ಗ್ಲಾಸನ್ನು ಏರಿಸಿ ಕುಳಿತ್ತಿದ್ದರು ಹಾಗಾಗಿ ಅವರು ಯಾರೆಂದು ನನಗೆ ಗೊತ್ತಿಲ್ಲ.

12. ನಾನು ಸೋಮೆಗೌಡರ ಮನೆಯ ಮುಂದೆ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿ ತನ್ನ ಮನೆಯಿಂದ ನಡೆದುಕೊಂಡು ಬಂದನು. ನೀವು ಮೇಲೆ ಹೇಳಿದ ಕಾರನ್ನು ಪಾಸ್ ಮಾಡಿಕೊಂಡು ಹೋಗಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸೋಮೆಗೌಡರವರ ಮನೆಯ ಸುತ್ತಮುತ್ತ ವಾಸದ ಮನೆಗಳಿವೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಯಾರ ಮನೆಗಳು ಇವೆ ಎಂದರೆ ಸಾಕ್ಷಿ ಸೋಮೆಗೌಡ, ಕಲ್ಲೇಗೌಡ, ಹುಚ್ಚೇಗೌಡ, ರಂಗೇಗೌಡ, ಉಮ್ಮಣ್ಣಿ, ಮಂಜುನಾಥ, ಮಲ್ಲಿಕಾರ್ಜುನ ಮತ್ತು ಇತರರ ಮನೆಗಳಿವೆ ಎನ್ನುತ್ತಾರೆ. ಸುಮಾರು 20 ನಿಮಿಷಗಳ ಕಾಲ ಘಟನೆ ನಡೆದಿದೆ. ಸದರಿ ಅವಧಿಯಲ್ಲಿ ನೀವು ಮೇಲೆ ಹೇಳಿದ ಮನೆಯವರು ಯಾರಾದರು ಸ್ಥಳಕ್ಕೆ ಬಂದರೆ ಎಂದರೆ ಸಾಕ್ಷಿ ಯಾರು ಬರಲಿಲ್ಲ ಕಾರಣ ಹಿಂದಿನ ದಿನ ಜಾತ್ರೆ

ನಡೆದಿತ್ತು ಹಾಗಾಗಿ ನಿದ್ರೆಗೆಟ್ಟಿದ್ದ ಮನೆಯವರೆಲ್ಲರೂ ಮಲ್ಲಗಿದ್ದರು ಎನ್ನುತ್ತಾರೆ.

13. ಮು.ಮಾ.1 ದೊಣ್ಣೆ ಎಲ್ಲಿ ಬಿದ್ದಿತ್ತು ಎಂದರೆ ಸಾಕ್ಷಿ ಗಲಾಟೆಯಾದ ಸ್ಥಳದಲ್ಲಿಯೇ ಬಿದ್ದಿತ್ತು ಎನ್ನುತ್ತಾರೆ. ಆ ರೀತಿಯ ದೊಣ್ಣೆಗಳು ಸ್ಥಳದಲ್ಲಿ ಎಷ್ಟು ಇದ್ದವು ಎಂದರೆ ಸಾಕ್ಷಿ ಸುಮಾರು 10 ದೊಣ್ಣೆಗಳು ಇದ್ದವು ಎನ್ನುತ್ತಾರೆ. ಅವು ಯಾರಿಗೆ ಸೇರಿದ್ದವು ಎಂದರೆ ಸಾಕ್ಷಿ ಸೋಮೆಗೌಡರ ಮನೆಯ ಸೈಟಿಗೆ ನೆಡಲಾಗಿತ್ತು ಎನ್ನುತ್ತಾರೆ. ಮು.ಮಾ.1 ರ ಮೇಲೆ ಅದನ್ನು ನೆಲಕ್ಕೆ ನೆಟ್ಟಿದ್ದ ಗುರುತು ಕಂಡುಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು ಗಲಾಟೆಯಾಗಿ ಇಷ್ಟು ದಿನಗಳು ಕಳೆದಿವೆ ಈಗ ಎಲ್ಲಿ ಕಂಡು ಬರುತ್ತದೆ ಎನ್ನುತ್ತಾರೆ.

14. ನಿಮ್ಮ ಗ್ರಾಮದಲ್ಲಿ ಸುಮಾರು 8 ರಿಂದ 10 ಸಮುದಾಯಕ್ಕೆ ಸೇರಿದ ಜನರಿದ್ದಾರೆ ಎಂದರೆ ಸರಿ. ಆರೋಪಿ ಬೈದಿದ್ದಾನೆ ಎಂದು ಹೇಳಿದ ರೀತಿ ಬೇರೆ ಸಮುದಾಯವರು ನಿಮಗೆ ಬೈದಿದ್ದಾರೆಯೇ ಎಂದರೆ ಸಾಕ್ಷಿ ಕೆಲಸಕ್ಕೆ ಬಂದಿಲ್ಲ ಎಂದು ಬೈದಿದ್ದಾರೆ ಆದರೆ ಅರೋಪಿ ಬೈದು ಹಲ್ಲೆ ಮಾಡಿದ ರೀತಿ ಮಾಡಿಲ್ಲ ಎನ್ನುತ್ತಾರೆ.

**(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.